# ಪದರಾಜ್ಯ (೧–೪)

## ಕೈಪಿಡಿ



ನವೆಂಬರ್–ಡಿಸೆಂಬರ್ ೨೦೧೯–೨೦

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಆರಂಭ ಯೋಜನೆ
Arambha 2019-20 Project
is Supported by Many
Individual Donors

# ಪದರಾಜ್ಯ

## ಉದ್ದೇಶ

* ಪದಸಂಪತ್ತನ್ನು ಬೆಳೆಸುವುದು
* ಬರೆಯುವ ಕೌಶಲ ಬೆಳೆಸುವುದು

## ಸೂಚನೆ

ಇದು ಹಿರಿಯ ಮತ್ತು ಕಿರಿಯ ಮಕ್ಕಳಿಗಾಗಿ ರೂಪಿಸಿರುವ ಭಾಷಾ ಆಟ. ಒಂದು ಸಲಕ್ಕೆ ಇಬ್ಬರು ಈ ಆಟದಲ್ಲಿ ಭಾಗವಹಿಸಬಹುದು. ಬೇರೆ ಇಬ್ಬರು/ನಾಲ್ವರು ಈ ಇಬ್ಬರಿಗೆ ಸಲಹೆಗಾರರಾಗಿ ಇರಬಹುದು.

ಒಂದು ಸುತ್ತಿನ ಆಟಕ್ಕೆ ಹತ್ತು ನಿಮಿಷದ ಅವಧಿ ಇರುತ್ತೆ. ಅವಕಾಶವಿದ್ದರೆ ಒಂದು ಗುಂಪಿಗೆ ಎರಡು ಅಥವಾ ಮೂರು ಸುತ್ತಿನ ಆಟ ಆಡಿಸಬಹುದು.

ಇಲ್ಲದಿದ್ದರೆ ಒಂದೇ ಸುತ್ತಿಗೆ ನಿಲ್ಲಿಸಬಹುದು.

ಪ್ರತಿಯೊಬ್ಬ ಆಟಗಾರನ ಬಳಿ ಒಂದು ಖಾಲಿ ಕಾಗದ ಮತ್ತು ಪೆನ್ ಅಥವಾ ಪೆನ್ಸಿಲ್ ಇರಬೇಕು.

ಪದರಾಜ್ಯ ಆಟ ಫಲಿತಾಂಶ ನಿರ್ಣಯಕ್ಕೆ ಈ **ಕೆಳಗಿನ ಸೂತ್ರ ಅನುಸರಿಸಬೇಕು.**

ಹ್ರಸ್ವಕ್ಕೆ ೧ ಅಂಕ
ದೀರ್ಘಕ್ಕೆ/ಒತ್ತಕ್ಷರಕ್ಕೆ ೨ ಅಂಕಗಳು

## ವಿಧಾನ

ಕನ್ನಡ ಕಲಿಕಾ ಮಾದರಿಗಳು ಹೊತ್ತಿಗೆಯಲ್ಲಿ ಕೊಟ್ಟಿರುವ ಅಕ್ಷರಗಳನ್ನು ಸರಿಯಾಗಿ ಕತ್ತರಿಸಿ, ಮಿಶ್ರಮಾಡಿ ಒಂದು ಪುಟ್ಟ ಡಬ್ಬದಲ್ಲಿ/ಚೀಲದಲ್ಲಿ ಹಾಕಬೇಕು. ಟಾಸ್ ಮಾಡಿ ಯಾರು ಆಟ ಆರಂಭಿಸಬೇಕು ಎಂಬುದನ್ನು ನಿರ್ಧರಿಸಬೇಕು. ಮೊದಲ ಆಟಗಾರ ಡಬ್ಬದಿಂದ ಐದು ಅಕ್ಷರಗಳನ್ನು

ತಾನು ಆಯ್ದುಕೊಂಡ ಐದು ಅಕ್ಷರಗಳನ್ನು ಮಾತ್ರ ಉಪಯೋಗಿಸಿ ಒಂದರ ಪಕ್ಕ ಒಂದು ಅಕ್ಷರ ಇಟ್ಟು, ಬೇರೆ ಬೇರೆ ಸಂಯೋಜನೆಗಳನ್ನು ಯತ್ನಿಸಿ ಒಂದು ಕನ್ನಡ ಪದ ಮಾಡಬೇಕು.

ಅದನ್ನು ತನ್ನ ನೋಟುಪುಸ್ತಕದಲ್ಲಿ ಬರೆಯಬೇಕು. ಅರ್ಥಪೂರ್ಣ ಪದ ಮಾಡಲು ಮೂರು ಅಕ್ಷರಗಳನ್ನು ಮಾತ್ರ ಉಪಯೋಗಿಸಲಾಗಿದೆ ಎಂದು ಭಾವಿಸಿ. ಆಗ ಉಳಿದಿರುವ ಎರಡು ಅಕ್ಷರಗಳನ್ನು ಮಧ್ಯದಲ್ಲಿ ಬೋರಲಾಗಿ ಹಾಕಬೇಕು. ತೆಗೆದುಕೊಂಡ ಅಕ್ಷರಗಳಿಂದ ಅರ್ಥಪೂರ್ಣ ಪದ ಮಾಡಲು ಸಾಧ್ಯವಾಗದಿದ್ದರೆ ತಾನು ಆಯ್ದುಕೊಂಡಿರುವ ಐದೂ ಅಕ್ಷರಗಳನ್ನು ಮಧ್ಯದಲ್ಲಿ ಬೋರಲಾಗಿ ಹಾಕಬೇಕು. ಅನಂತರ ಎರಡನೆಯವರ ಸರತಿ. ಆಗಲೂ ಇವೇ ನಿಯಮ.

ಒಂದು ಸುತ್ತಿನ ಆಟದಲ್ಲಿ ಯಾರು ಹೆಚ್ಚು ಅಂಕಗಳಿಸಿದ್ದಾರೆ ಎಂಬುದನ್ನು ಸೂತ್ರದ ನಿಯಮ ಅನುಸರಿಸಿ ನಿರ್ಧರಿಸಬೇಕು.

**ಉದಾ:**

ಮೊದಲನೆಯ ಆಟಗಾರ ಮಾಡಿರುವ ಶಬ್ದಗಳು ಹೀಗಿವೆ ಎಂದ ಇಟ್ಟುಕೊಳ್ಳಿ:

**ಜಾನಕಿ, ಸಾಹುಕಾರ, ರಾತ್ರಿ, ಅರಸ**

ಎರಡನೆಯ ಆಟಗಾರನ ಶಬ್ದಗಳು ಹೀಗಿವೆ ಎಂದ ಇಟ್ಟುಕೊಳ್ಳಿ:

**ಬಲ, ರಾಜ, ಗೋಪುರ, ಸಂಗೀತ**

# ನಿಯಮದ ಪ್ರಕಾರ

ವೊದಲನೆಂಯು ಆಟಗಾರನಿಗೆ ೪+೬+೪+೩=೧೭

ಎರಡನೆಂಯು ಆಟಗಾರನಿಗೆ ೨+೩+೪+೫=೧೪

ಆದ್ದರಿಂದ ಇಲ್ಲಿ ಮೊದಲನೆಯ ಆಟಗಾರನ ಗಳಿಕೆ ಹೆಚ್ಚಾಗಿದೆ.

ಸಮಯವಿದ್ದರೆ ಎರಡು/ಮೂರು ಸುತ್ತುಗಳ ಆಟ ಆಡಬಹುದು.

ಇಲ್ಲದಿದ್ದರೆ ಮುಂದಿನ ಗುಂಪು ಹೊಸ ಆಟ ಆರಂಭಿಸಬಹುದು.

**ವಿ.ಸೂ:** ಪದರಾಜ್ಯ ಆಟದ ನಿಯಮಗಳನ್ನು ಮನದಟ್ಟು ಮಾಡಿಕೊಟ್ಟು ಮಕ್ಕಳು ತಮ್ಮಷ್ಟಕ್ಕೆ ತಾವು ಆಡಿಕೊಳ್ಳಲು ಅವಕಾಶ ನೀಡಬಹುದು.



**ಸಂಪರ್ಕ ಮಾಹಿತಿ**


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬,'ಪುಷ್ಪಾಂಜಲಿ' ೩ನೇ ಅಡ್ಡರಸ್ತೆ
ಶಿವಗಿರಿ, ಧಾರವಾಡ–೫೮೦೦೦೭
ಮೊ. ೯೯೮೬೬೬೧೦೫೫
dwanitrust@gmail.com
www.dhwanitrust.org



ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.